# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 1334 (1410) |
| **ಸದಸ್ಯರ ಹೆಸರು** | : | ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸ ಬೇಕಾದ ದಿನಾಂಕ** | : | 18.12.2025 |
| **ಉತ್ತರಿಸುವ ಸಚಿವರು** | : | ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರವು ತನ್ನ ಪ್ರವಾಸೋದ್ಯಮ ಕೇಂದ್ರಗಳನ್ನು ಬದಿಗೊತ್ತಿ ಕೇರಳದ ವೈನಾಡು ಪ್ರವಾಸೋದ್ಯಮವನ್ನು ಜಾಹೀರಾತು ಮತ್ತು ಪ್ರಚಾರಗಳ ಮೂಲಕ ಉತ್ತೇಜಿಸುವುದಕ್ಕೆ ಕಾರಣವೇನು; | ಪ್ರವಾಸೋದ್ಯಮ ಇಲಾಖೆಯಿಂದ ಕೇರಳದ ವೈನಾಡು ಪ್ರವಾಸೋದ್ಯಮವನ್ನು ಉತ್ತೇಜಿಸಲು ಯಾವುದೇ ಪ್ರಚಾರ ಮತ್ತು ಉತ್ತೇಜನ ಕ್ರಮ ಕೈಗೊಂಡಿರುವುದಿಲ್ಲ. |
| ಆ) | ವೈನಾಡು ಪ್ರವಾಸೋದ್ಯಮ ಪ್ರಚಾರಕ್ಕೆ ಕರ್ನಾಟಕ ಸರ್ಕಾರ ಅಥವಾ ಪ್ರವಾಸೋದ್ಯಮ ಇಲಾಖೆ ಯಾವುದೇ ರೀತಿಯ ಒಪ್ಪಂದ (MOU) ಮಾಡಿಕೊಂಡಿದೆಯೇ: (ಇದ್ದರೆ ಅದರ ಪ್ರತಿಯನ್ನು ಸಲ್ಲಿಸುವುದು) | ವೈನಾಡು ಪ್ರವಾಸೋದ್ಯಮ ಪ್ರಚಾರಕ್ಕೆ ಇಲಾಖೆಯು ಯಾವುದೇ ರೀತಿಯ ಒಪ್ಪಂದವನ್ನು (MOU) ಮಾಡಿಕೊಂಡಿರುವುದಿಲ್ಲ. |
| ಇ) | ಕೇರಳದ ವೈನಾಡು ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸಲು ಸರ್ಕಾರದಿಂದ ಮಾಡಿದ ವೆಚ್ಚದ ವಿವರ ಹಾಗೂ ಅದೇ ಅವಧಿಯಲ್ಲಿ ಕರ್ನಾಟಕದ ಹಂಪಿ, ಕೊಡಗು, ಬೀದರ್, ಚಿಕ್ಕಮಗಳೂರು ಮೊದಲಾದ ಪ್ರವಾಸಿ ಸ್ಥಳಗಳ ಪ್ರಚಾರಕ್ಕೆ ತೆಗೆದುಕೊಂಡಿರುವ ಕ್ರಮಗಳ ವಿವರವನ್ನು ನೀಡುವುದು? | ಕೇರಳದ ವೈನಾಡು ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸಲು ಇಲಾಖೆಯಿಂದ ಯಾವುದೇ ವೆಚ್ಚ ಮಾಡಿರುವುದಿಲ್ಲ.<br><br>ಕರ್ನಾಟಕ ಪ್ರವಾಸೋದ್ಯಮವನ್ನು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಪಡಿಸುವ ದೃಷ್ಟಿಯಿಂದ ಹಾಗೂ ಕರ್ನಾಟಕ ರಾಜ್ಯದ ಪ್ರವಾಸಿ ತಾಣಗಳನ್ನು ಹಾಗೂ ನಾಡಿನ ಕಲೆ, ಸಂಸ್ಕೃತಿ, ಸಾಂಸ್ಕೃತಿಕ ಪರಂಪರೆ ಸೇರಿದಂತೆ ವಾಸ್ತುಶಿಲ್ಪವನ್ನು ಇತರೆ ರಾಷ್ಟ್ರಗಳಿಗೆ ಪರಿಚಯಿಸುವ ಸಲುವಾಗಿ ಹಾಗೂ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ವಿವಿಧ ದೇಶಗಳಲ್ಲಿ ನಡೆಯಲಿರುವ ಪ್ರಮುಖ ಅಂತರಾಷ್ಟ್ರೀಯ ಮೇಳ/ರೋಡ್‌ಷೋಗಳಲ್ಲಿ ಹಾಗೂ ದೇಶದ ವಿವಿಧ ಭಾಗಗಳಲ್ಲಿ ಆಯೋಜಿಸಲ್ಪಡುವ ವಿವಿಧ ರಾಷ್ಟ್ರೀಯ ಮೇಳಗಳಲ್ಲಿ ಇಲಾಖೆಯು ಪ್ರತ್ಯೇಕವಾಗಿ ಮಳಿಗೆ ಜಾಗವನ್ನು ಪಡೆದು ನಾಡಿನ ಕಲೆ, ಸಂಸ್ಕೃತಿ, ಪರಂಪರೆ, ಶ್ರೀಮಂತ ಇತಿಹಾಸ, ವನ್ಯಜೀವಿ ಮತ್ತು ಪ್ರವಾಸಿ ತಾಣಗಳ ಅತ್ಯಾಕರ್ಷಕ ವಿನ್ಯಾಸಗಳಲ್ಲಿ ಮಳಿಗೆಯನ್ನು ತೆರೆದು ಪ್ರಚಾರ ಕೈಗೊಳ್ಳುತ್ತಿದೆ. |

| | | |
|---|---|---|
| | | ರಾಜ್ಯದ ಪ್ರವಾಸಿ ಭಾಗಿದಾರರೊಂದಿಗೆ ಈ ಮೇಳಗಳ ಸಂದರ್ಭದಲ್ಲಿ ಇಲಾಖಾ ವತಿಯಿಂದ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖ ನಗರಗಳಲ್ಲಿ ಇಲಾಖಾ ವತಿಯಿಂದ B2B ರೋಡ್-ಷೋ ಕಾರ್ಯಕ್ರಮಗಳನ್ನು ಸಹ ಯಶಸ್ವಿಯಾಗಿ ಆಯೋಜಿಸಲಾಗಿರುತ್ತದೆ. ಇದರೊಂದಿಗೆ 2024-25ನೇ ಸಾಲಿನಲ್ಲಿ ಬೆಂಗಳೂರಿನಲ್ಲಿ ದಿನಾಂಕ:26-02-2025 ರಿಂದ ದಿನಾಂಕ:28-02-2025 ರವರೆಗೆ ಕರ್ನಾಟಕ ಇಂಟರ್‌ನ್ಯಾಷನಲ್ ಟ್ರಾವೆಲ್ ಎಕ್ಸ್‌ಪೋವನ್ನು (KITE) ಪ್ರವಾಸೋದ್ಯಮ ಇಲಾಖೆಯಿಂದ Bengaluru International Exhibition Center (BIEC) ನಲ್ಲಿ ಆಯೋಜಿಸಲಾಗಿರುತ್ತದೆ.<br><br>ಧಾರವಾಡ, ಹಾವೇರಿ, ಉತ್ತರ ಕನ್ನಡ, ರಾಯಚೂರು, ಕೊಪ್ಪಳ, ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಗಳನ್ನೊಳಗೊಂಡಂತೆ ಕರ್ನಾಟಕ ಟೂರಿಸಂ ಸೊಸೈಟಿ, ಸ್ಟೇಕ್ ಹೋಲ್ಡರ್ಸ್, ಟೂರಿಸಂ ಟ್ರಾವೆಲ್ಸ್ ಅಸೋಶಿಯೇಷನ್ ಸಂಸ್ಥೆಯ ಸಹಭಾಗಿದಾರರ ಸಹಯೋಗದೊಂದಿಗೆ ದಿನಾಂಕ:31-10-2025ರಂದು ಗದಗ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ "CONNECT" ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ.<br><br>ಹಂಪಿ, ಕೊಡಗು, ಬೀದರ್, ಚಿಕ್ಕಮಗಳೂರು ಪ್ರವಾಸಿ ತಾಣಗಳ ಪ್ರಚಾರವನ್ನು ಪ್ರವಾಸೋದ್ಯಮ ಇಲಾಖೆ, ಕೆ.ಎಸ್.ಟಿ.ಡಿ.ಸಿ ಮತ್ತು ಜೆ.ಎಲ್.ಆರ್ ಸಂಸ್ಥೆಯ SOCIAL MEDIA HANDLES ಮೂಲಕ ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ:ಟಿಒಆರ್ 311 ಟಿಡಿವಿ 2025**

**(ಎಚ್.ಕೆ.ಪಾಟೀಲ್)**
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು